ದಿನಾಂಕ 01-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯವರ ಪರವಾಗಿ ವಿ.ವಿ.ಆರ್ ವಕೀಲರವರಿಂದಃ**

ನಾನು ಕೃಷಿ ಕೆಲಸ ಮಾಡುತ್ತೇನೆ. ನಾನು ಹಲವಾರು ಪ್ರಕರಣಗಳಲ್ಲಿ ಜಿಪಿಎ ಅಧಾರದ ಮೇಲೆ ಸಾಕ್ಷ್ಯವನ್ನು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಠಕ್ಕೆ ಸಂಬಂದಪಟ್ಟ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಲ್ಯಾಂಡ್ ಟ್ರಿಬ್ಯುನಲ್ ಪ್ರಕರಣಗಳಲ್ಲಿ ಜಿಪಿಎ ಆಧಾರದ ಮೇಲೆ ಸಾಕ್ಷ್ಯ ನುಡಿಯಲು ಮುಂದುವರಿದಿದ್ದೇನೆ ಎಂದರೆ ಸರಿಯಲ್ಲ. ಬನ್ನಂಜೆ ಮಹಾಲಿಂಗೇಶ್ವರ ದೇವಸ್ಥಾನದ ಪ್ರಕರಣದಲ್ಲಿ ನಾನು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸಾಕ್ಷಿದಾರರು ನಾನು ವಾದಿ ಪರವಾಗಿ ಸಾಕ್ಷ್ಯವನ್ನು ನುಡಿದಿರುತ್ತೇನೆ. ನಾನು ಮಠಕ್ಕೆ ಸಂಬಂದಪಟ್ಟ ಪ್ರಕರಣದಲ್ಲಿ ದಾಖಲೆಗಳಿಗೆ ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆ. ಬೇರೆ ದಾಖಲೆಗಳಿಗೆ ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆಯೋ ಇಲ್ಲವಾ ಎಂದು ಈಗ ನನಗೆ ನೆನಪು ಇಲ್ಲ.

ದಸ್ತಾವೇಜು ನೋಡಿದರೆ ವ್ಯಕ್ತಿಯ ಹೆಬ್ಬೆಟ್ಟನ್ನು ಗುರುತಿಸಲು ಸಾಮರ್ಥ್ಯ ಇರುತ್ತದೆ. 1992 ರಿಂದ 1994 ವರೆಗೆ ನಾನು ಕೃಷ್ಣ ಮಠದಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಿರುತ್ತೇನೆ. ಇದನ್ನು ಸಾಬೀತು ಪಡಿಸಲು ನನ್ನ ಬಳಿ ದಾಖಲೆ ಇರುತ್ತದೆ. ನಾನು ಮ್ಯಾನೇಜರ್ ಆಗಿ ಕೆಲಸ ಮಾಡುವ ಸಮಯದಲ್ಲಿ ಹಲವಾರು ಜನ ಬಂದು ಹೋಗುತ್ತಿದ್ದರು ಅವರಲ್ಲಿ ಕೆಲವು ಜನರ ಪರಿಚಯ ನನಗೆ ಇರುತ್ತಾರೆ. ನನಗೆ ವ್ಯಕ್ತಿಯ ಹೆಸರನ್ನು ಈಗ ಹೇಳಲು ಬರುವುದಿಲ್ಲ.

ಕೊನೆಯದಾಗಿ ಚೆಲುವಮ್ಮನವರನ್ನು ಬಂಡಾರಕೇರಿ ಮಠದಲ್ಲಿ 2009 ರಲ್ಲಿ ಬೇಟಿಯಾಗಿರುತ್ತೇನೆ. ಚೆಲುವಮ್ಮನ ಮಗ ಎಂದರೆ 1 ನೇ ಪ್ರತಿವಾದಿ ಮತ್ತು ವಾದಿಯವರ ಪರಿಚಯ ನನಗೆ ಇರುತ್ತದೆ.

ಪದ್ಮನಾಭ ರಾವ್ ರವರ ಮಗ ಕೃಷ್ಣರಾಜ್ ರವರನ್ನು 6 ತಿಂಗಳಿಂದ ಪರಿಚಯ ಇರುತ್ತದೆ. ನಾನು ಚೆಲುವಮ್ಮನವರು ಮಾಡಿದ ವಿಲ್ ನಾಮೆಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ವಿಲ್ ನಾಮೆಗೆ ರಿಜಿಸ್ಟರ್ ಕಚೇರಿಯಲ್ಲಿ ಸಾಕ್ಷಿಯಾಗಿ ಸಹಿ ಮಾಡಿದ್ದು ಬೇರೆ ಎಲ್ಲೂ ಮಾಡಿಲ್ಲ. ಅದೇ ರೀತಿ ಚೆಲುವಮ್ಮನವರು ಕೂಡ ರಿಜಿಸ್ಟರ್ ಕಚೇರಿಯಲ್ಲಿ ಸಹಿ ಮಾಡಿದ್ದು ಬೇರೆ ಎಲ್ಲೂ ಮಾಡಿಲ್ಲ.

ನೋಂದಣಿ ಕಚೇರಿಯಲ್ಲಿ ಚೆಲುವಮ್ಮ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಹೆಬ್ಬೆಟ್ಟು ಒಟ್ಟು 5 ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ. ನನ್ನ ಪ್ರಕಾರ ರಿಜಿಸ್ಟ್ರಾರ್ ಕಚೇರಿಯಲ್ಲಿ ವಿಲ್ ರಿಜಿಸ್ಟ್ರಾರ್ ಪುಸ್ತಕಕ್ಕೆ ಹೆಬ್ಬೆಟ್ಟು ಹಾಕಿರುತ್ತಾರೆ. ಸಾಕ್ಷಿದಾರರಿಗೆ ಸದ್ರಿ ವಿಲ್ ನಾಮೆ ತೋರಿಸಲಾಗಿ ಅದರಲ್ಲಿ ಈಗಾಗಲೇ ನಿಶಾನೀಕರಿಸಿದ ನಿಡಿ 1 (ಬ) ಮತ್ತು (ಸಿ) ಹೆಬ್ಬಿಟ್ಟುಗಳನ್ನು ಚೆಲುವಮ್ಮವನವರು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಹಾಕಿರುತ್ತಾರೆ ಎಂದು ಹೇಳುತ್ತಾರೆ. ಚೆಲುವಮ್ಮನವರಿಗೆ ವಿಲ್ ಮಾಡುವ ಸಮಯದಲ್ಲಿ ಅವರ ವಯಸ್ಸು 94- 95 ಆಗಿರಬಹುದು. ಚೆಲುವಮ್ಮನವರ ಮಗನಾದ ಪದ್ಮನಾಭ ರಾವ್ ರವರು ಚೆಲುವಮ್ಮನರನ್ನು ಸಬ್ ರಿಜಿಸ್ಟ್ರಾರ್ ಕಚೇರಿಗೆ ಕರೆದುಕೊಂಡು ಬಂದಿರುತ್ತಾರೆ. ಚೆಲುವಮ್ಮನವರು ಸಬ್ ರಿಜಿಸ್ಟ್ರಾರ್ ಕಚೇರಿಗೆ ನಡೆದುಕೊಂಡು ಬಂದಿರುತ್ತಾರೆ. ಚೆಲುವಮ್ಮನಿಗೆ ವೃದ್ಧಾಪ್ಯವಾಗಿದ್ದರಿಂದ ಪದ್ಮನಾಭ ರಾವ್ ಮತ್ತು ಅವರ ಮಗ ಕೃಷ್ಣ ರಾಜ್ ಸೇರಿ ಅವರ ಇಚ್ಚೆಯ ವಿರುದ್ದ ನಾನು ಅದರಲ್ಲಿ ಪಾಲುಗೊಂಡು ವಿಲ್ಲನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಲವಾರು ಪ್ರಕರಣಗಳಲ್ಲಿ ಜಿಪಿಎ ತೆಗೆದುಕೊಂಡು ಹಲವಾರು ದಾಖಲೆಗಳಿಗೆ ಸಾಕ್ಷಿದಾರನಾಗಿ ಇದ್ದು ಅದೇ ವೃತ್ತಿಯನ್ನು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಮತ್ತು 3 ನೇ ಪ್ರತಿವಾದಿಯವರು ವಾದಿಯವರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

4 ರಿಂದ 6 ನೇ ಪ್ರತಿವಾದಿಯವರು ಈ ಸಮಯದಲ್ಲಿ ಸಾಕ್ಷಿದಾರರಿಗೆ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.